**<u>ಸಾಕ್ಷಿಯನ್ನು ದಿಃ 17.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಈ.ಬಿ.ಆರ್ ವಕೀಲರಿಂದಃ-</u>**

ಈ ದಾವೆಯಲ್ಲಿ ಸಲ್ಲಿಸಿದ ದಾಖಲೆಗಳ ಬಗ್ಗೆ ತಿಳಿದುಕೊಂಡಿದ್ದೇನೆ. 6 ನೇ ಪ್ರತಿವಾದಿಗೆ ನೊಟೀಸು ಕಳುಹಿಸಿದಾಗ 6 ನೇ ಪ್ರತಿವಾದಿಯ ವಿಳಾಸವನ್ನು ತೋಟದ ಮನೆಯಾದ ಆದ ಕಾರಣ ಮನೆ ನಂಬರ್ ಇರಲಿಲ್ಲ, ಹುಣಸೂರು ತಾಲ್ಲೂಕು, ತೊಂಡಾಳು ಗ್ರಾಮ ಎಂದು ತೋರಿಸಿದ್ದೇನೆ ಎನ್ನುತ್ತಾರೆ. ನಿಪಿ. 2 ರ ಲೀಗಲ್ ನೊಟೀಸಿನಲ್ಲಿ 6 ನೇ ಪ್ರತಿವಾದಿಯ ವಿಳಾಸ ತೊಂಡಾಳು ಗ್ರಾಮ ಎಂದು ಕೊಟ್ಟಿರುವ ಬಗ್ಗೆ ತಿಳಿದುಕೊಂಡಿರುತ್ತೇನೆ. ನಿಪಿ. 2 ರ ಲೀಗಲ್ ನೊಟೀಸ್ ನ 6 ನೇ ಪ್ರತಿವಾದಿಯ ವಿಳಾಸ ತೊಂಡಾಳು ಗ್ರಾಮ ಎಂದು ನಮೂದು ಮಾಡಿರುವ ನೊಟೀಸಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಿರಾ ಎಂದರೆ ನಾನು ಹಾಜರು ಪಡಿಸಿಲ್ಲ, ನಮ್ಮ ವಕೀಲರು ಹಾಜರು ಪಡಿಸಿರುತ್ತಾರೆ.

ಸದರಿ ನಿಪಿ. 2 ರ ನೊಟೀಸಿನ ಪ್ರತಿಯಲ್ಲಿ 6 ನೇ ಪ್ರತಿವಾದಿಯ ವಿಳಾಸ ವನ್ನು, ಹೆಡ್ ಪೋಸ್ಟ್ ಆಪೀಸು, ಲಸ್ಕರ್ ಪೊಲೀಸ್ ಸ್ಟೇಶನ್ ಸರ್ಕಲ್, ಮೈಸೂರು ಎಂದು ತೋರಿಸಲಾಗಿದೆ. ಸಾಕ್ಷಿ ಪುನಃ ಆ ಸಮಯದಲ್ಲಿ ಅವರು ಪೋಸ್ಟ ಮ್ಯಾನ್ ಆಗಿ ಅಲ್ಲಿಯೆ ಕೆಲಸ ಮಾಡುತ್ತಿದ್ದರು ಎನ್ನುತ್ತಾರೆ. ಸದರಿ ರವರಿಗೆ ನೂಟೀಸು ಜಾರಿ ಆದ ಬಗ್ಗೆ ನಾನು ತಿಳಿದುಕೊಂಡಿಲ್ಲ. 6 ನೇ ಪ್ರತಿವಾದಿಗೆ ನಾನು ಕಳುಹಿಸಿದಂತಹ ನೊಟೀಸು ಜಾರಿ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರು ಪಡಿಸಿದ ನಿಪಿ. 1 ರ ಅಗ್ರಿಮೆಂಟ್ ಪ್ರತಿಯಲ್ಲಿ 6 ನೇ ಪ್ರತಿವಾದಿ ತೊಂಡಾಳು ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ ಎಂದು ತೋರಿಸಲಾಗಿದೆ. ಅಗ್ರಿಮೆಂಟ್ ಮಾಡಿಕೊಂಡ ದಿನಾಂಕದಿಂದ ಲೀಗನ್ ನೊಟೀಸು ಕಳುಹಿಸಿದ ದಿನಾಂಕದವರೆಗೆ ಎಷ್ಟು

ದಿನಗಳ ಅಂತರ ಇತ್ತು ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿ ನಿಪಿ. 2 ರಲ್ಲಿ ನಮೂದಿಸಿದ ತೊಂಡಾಳು ಗ್ರಾಮಕ್ಕೆ ನೊಟೀಸು ಕಳುಹಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಆ ಸಮಯದಲ್ಲಿ ಅಲ್ಲಿ ಇರಲಿಲ್ಲ ಎನ್ನುತ್ತಾರೆ. ಸಾಕ್ಷಿ ಪುನಃ ಮೈಸೂರಿನ ಬಸವನಗುಡಿ ಸರ್ಕಲ್ ನಲ್ಲಿ ಮನೆ ಮಾಡಿಕೊಂಡು ವಾಸ ಇದ್ದರು ಎಂದು ನುಡಿಯುತ್ತಾರೆ. ಸದರಿ ವಿಚಾರ ನನಗೆ ಲೀಗನ್ ನೊಟೀಸು ಕೊಡುವ ದಿನಾಂಕದಂದು ಗೊತ್ತಿತ್ತು. ಸದರಿ ವಿಳಾಸಕ್ಕೆ ನೊಟೀಸು ಕೊಡಲು ನನಗೆ ತೊಂದರೆ ಇತ್ತಾ ಎಂದರೆ ಪೂರ್ಣ ವಿಳಾಸ ಇಲ್ಲದ ಕಾರಣ ಕುಟುಂಬದ ಸದಸ್ಯರಿಗೆ ಒಟ್ಟಿಗೆ ಕೊಡಲಾಗಿತ್ತು ಎನ್ನುತ್ತಾರೆ.

2015 ರಲ್ಲಿ ದಾವೆ ಹಾಕುವ ಕಾಲಕ್ಕೆ ವಾದ ಪತ್ರದಲ್ಲಿ 6 ನೆ ಪ್ರತಿವಾದಿಯ ವಿಳಾಸ ತೊಂಡಾಳು ಗ್ರಾಮ, ಹುಣಸೂರು ಎಂದು ತೋರಿಸಿದ್ದೇನೆ. ಸದರಿ 6 ನೇ ಪ್ರತಿವಾದಿಯ ವಾದ ಪತ್ರದಲ್ಲಿ ನಮೂದಿಸದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಪತ್ರದಲ್ಲಿ 6 ನೇ ಪ್ರತಿವಾದಿ ವಿಳಾಸ ಮನೆ ನಂ. 48, ಗಂಗಾದರೇಶ್ವರ ಸರ್ಕಲ್, ಬಸವೇಶ್ವರ ನಗರ, ಮೆಟಾಗಲ್ಲಿ, ಮೈಸೂರು ಎಂದು ನಮೂದಿಸಿರುತ್ತೇವೆ ಎಂದರೆ ಸರಿ. 6 ನೇ ಪ್ರತಿವಾದಿಗೆ ನಾವು ಕಳುಹಿಸಿದ ಲೀಗಲ್ ನೊಟೀಸು ಜಾರಿಯಾಗಿಲ್ಲ, ಅದಕ್ಕೆ ಅವರು ಯಾವುದೆ ಪ್ರತ್ತ್ಯುತ್ತರ ಕೊಟ್ಟಿಲ್ಲ ಎಂದರೆ ಸಾಕ್ಷಿ ಮೊದಲು ಹೌದು ನುಡಿದು ನಂತರ ಸುಳ್ಳು ಎಂದು ನುಡಿಯುತ್ತಾರೆ.

ನಿಪಿ. 1 ರ ಅಗ್ರಿಮೆಂಟ್ ನಲ್ಲಿ ಏನೇ ಬರೆದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಎನ್.ಡಿ ಸಂದೀಪ್ ಎಂಬ ವಕೀಲರು ಸದರಿ ಅಗ್ರಿಮೆಂಟ್ ಅನ್ನು ಬರೆದಿರುತ್ತಾರೆ. ಸದರಿ ಅಗ್ರಿಮೆಂಟ್ ಗೆ ಸಾಕ್ಷಿದಾರರಾಗಿ ತೊಂಡಾಳು ಗ್ರಾಮದ ನರಸಿಂಹ ಶೆಟ್ಟಿ ರವರ ಮಗ ಅವರು ಹೆಸರು ಗೊತ್ತಿಲ್ಲ, ಅವರು ಸಹಿ ಮಾಡಿರುತ್ತಾರೆ. ಸದರಿ ಅಗ್ರಿಮೆಂಟ್ ಗೆ ಎಷ್ಟು ಜನ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ

ಎಂದು ನನಗೆ ಗೊತ್ತಿಲ್ಲ, ಪ್ರತಿವಾದಿಯವರೆ ಅವರ ಊರಿನವರನ್ನು ಕರೆದುಕೊಂಡು ಬಂದು ಸಾಕ್ಷಿಯಾಗಿ ಸಹಿ ಮಾಡಿಸಿದ್ದರು ಎನ್ನುತ್ತಾರೆ. ನಿಪಿ. 1 ಪತ್ರ ಬರವಣಿಗೆ ಆಗುವ ಕಾಲಕ್ಕೆ ನಾನು ಸಹ ಹಾಜರಿದ್ದೆ. ಹಾಗೆ ನಿಪಿ. 1 ರ ಪತ್ರ ಬರವಣಿಗೆ ಆಗುವ ಕಾಲಕ್ಕೆ ನಾನು ಹಾಜರಿದ್ದರೆ ಯಾರ್ರೆಲ್ಲಾ ಇದ್ದರು ಎಂದು ಗೊತ್ತಾಗುತ್ತಿತ್ತು, ನಾನು ಹಾಜರಿರದ ಕಾರಣ ಯಾರೆಲ್ಲಾ ಹಾಜರಿದ್ದರು ಎಂದು ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ಸದರಿ ನಿಪಿ. 1ರ ದಾಖಲೆ ಪ್ರಕಾರ 6 ಲಕ್ಷದ 25 ಸಾವಿರ ರೂ. ಗಳ ಪ್ರತಿಫಲ ನಿಗದಿ ಮಾಡಲಾಗಿತ್ತು. ಮುಂಗಡ ಹಣವಾಗಿ 1,50,000/- ಕೊಡಲಾಗಿತ್ತು. ಸದರಿ ಹಣವನ್ನು ಹಿರಿಯ ಅಣ್ಣ ದಾಸಶೆಟ್ಟಿ, ಚಂದ್ರಶೆಟ್ಟಿ, ಕೃಷ್ಣಶೆಟ್ಟಿ ಮತ್ತು ಸೋಮಶೆಟ್ಟಿ ಇದ್ದರು. ಆ ಸಮಯದಲ್ಲಿ ಅವರ ತಂಗಿ ಶಕುಂತಲಾ ರವರು ಹಾಜರಿದ್ದರು. ಸದರಿ 4 ಜನರು ಹಣ ಪಡೆದರು. ಉಳಿದ ರೂ.4,75,000/- ಹಣ ಕೊಡಬೇಕಿತ್ತು. ಸದರಿ 4 ಜನರು ಹಣ ಪಡೆದ ಬಗ್ಗೆ ನಿಪಿ.1 ರಲ್ಲಿ ನಮೂದು ಇರುತ್ತದೆ. ಆ ರೀತಿಯ ಬರವಣಿಗೆ ಆಗದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಲೀಗಲ್ ನೊಟೀಸಿನಲ್ಲಿ ಮುಂಗಡ ಹಣ ಎಂದು 1,50,000/-, 1,00,000/- ಮತ್ತು 1,00,000/- ಒಟ್ಟು ರೂ. 3,50,000/- ಕೊಡಲಾಗಿತ್ತು ಎಂದು ಬರೆಸಲಾಗಿದೆ. ಅದರಲ್ಲಿ ಒಂದೊಂದು ಲಕ್ಷ ರೂ.ಗಳನ್ನು ಕೃಷ್ಣಶೆಟ್ಟಿ ಮತ್ತು ಸೋಮಶೆಟ್ಟಿ ರವರಿಗೆ ನೀಡಿ ದಾಖಲೆಗೆ ಸಹಿ ಪಡೆದಿರುತ್ತೇನೆ. ಕೃಷ್ಣಶೆಟ್ಟಿ ಮತ್ತು ಸೋಮಶೆಟ್ಟಿ ರವರಿಗೆ ತಲಾ 1-1 ಲಕ್ಷ ರೂ ಹಣ ಕೊಟ್ಟ ಬಗ್ಗೆ ಲೀಗಲ್ ನೊಟೀಸಿನಲ್ಲಿ ನಮೂದು ಇಲ್ಲ ಎಂದರೆ ಸರಿ. ಸದರಿ ರವರಿಗೆ ಜಮೀನಿನ ಪ್ರತಿಫಲದ ಹಣ ಎಂದೆ ಕೊಡಲಾಗಿದೆ. ಸದರಿ ಹಣ ಕೊಟ್ಟ ಬಗ್ಗೆ ಪ್ರನೋಟ್ ನಲ್ಲಿ ಕೃಷ್ಣಶೆಟ್ಟಿ ಮತ್ತು ಸೋಮಶೆಟ್ಟಿ ಬರೆದುಕೊಟ್ಟಿರುತ್ತಾರೆ. ಸದರಿ ಪ್ರನೋಟ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.